ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2014-15ನೇ ಸಾಲಿನಲ್ಲಿ ಸೌರ ಬೆಳಕು ಯೋಜನೆಯಡಿ ಶೇ. 100%ರಷ್ಟು ಅನುದಾನ ಬಿಡುಗಡೆ - ಕುರಿತು.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 241 ಎಎಫ್‌ಎನ್ 2013 ದಿನಾಂಕ 01.08.2013 ಕ್ರ.ಸಂ. VII (45)
2) ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 5 ಗ್ರಾಇಂಕಾ 2009 ದಿನಾಂಕ 14.07.2009
3) ಸರ್ಕಾರಿ ಸುತ್ತೋಲೆ ಸಂಖ್ಯೆ : ಗ್ರಾಅಪ/22/ಜೈಅಯೋ/2014 ದಿನಾಂಕ 25.09.2014
4) ಸರ್ಕಾರಿ ಪತ್ರ ಸಂಖ್ಯೆ : ಗ್ರಾಅಪ/22/ಜೈಅಯೋ/2014 ದಿನಾಂಕ 25.09.2014

**ಪ್ರಸ್ತಾವನೆ :**

2014-15ನೇ ಸಾಲಿನ ರಾಜ್ಯ ಆಯವ್ಯಯದಡಿ, ಉಲ್ಲೇಖ (1)ರ ಸರ್ಕಾರದ ಆದೇಶದರಿತ್ಯ ಲೆಕ್ಕ ಶೀರ್ಷಿಕೆ 2810-00-101-0-91 (2810-01-198-1-01) ಯೋಜನೆಯಡಿ ₹ 310.00 ಲಕ್ಷಗಳ ಅನುದಾನವನ್ನು, ಪ್ರಾಯೋಗಿಕ ಜಿಲ್ಲಾ ಪಂಚಾಯಿತಿಗಳಿಗೆ ಆಯ್ಕೆಯಾದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಿಗೆ ಸೌರ ಬೀದಿ ದೀಪಗಳನ್ನು ಅಳವಡಿಸುವ ಸಲುವಾಗಿ, ಹಂಚಿಕೆ ಮಾಡಲಾಗಿದೆ. ಉಲ್ಲೇಖ (2)ರ ಸರ್ಕಾರಿ ಆದೇಶದಲ್ಲಿ ಸೌರ ಬೆಳಕು ಯೋಜನೆಯನ್ನು ಜಾರಿಗೊಳಿಸಲಾಗಿದೆ. ಉಲ್ಲೇಖ (3)ರ ಸರ್ಕಾರಿ ಸುತ್ತೋಲೆಯಲ್ಲಿ ವಿವರವಾದ ನೂತನ ಮಾರ್ಗಸೂಚಿಗಳನ್ನು ಹೊರಡಿಸಿದೆ. ಉಲ್ಲೇಖ (4)ರ ಸರ್ಕಾರಿ ಪತ್ರದಲ್ಲಿ 2014-15ನೇ ಸಾಲಿನಲ್ಲಿ ಸೌರ ಬೆಳಕು ಯೋಜನೆಯನ್ನು ಅನುಷ್ಠಾನಗೊಳಿಸಲು 4 ಪ್ರಾಯೋಗಿಕ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಪ್ರಯುಕ್ತ ನಿಗದಿಪಡಿಸಿದ ಪೂರ್ಣ ಅನುದಾನ ರೂ.285.00ಲಕ್ಷಗಳಲ್ಲಿ ಆಯ್ಕೆಯಾದ 4 ಜಿಲ್ಲೆಗಳಿಗೆ ಪೂರ್ಣ ಅನುದಾನವನ್ನು ಶೇ.100% ರಷ್ಟು ರೂ.285.00ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲು ಸರ್ಕಾರವು ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/22/ಜೈಅಯೋ/2014, ಬೆಂಗಳೂರು, ದಿನಾಂಕ 06.02.2015**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, ₹ 285.00 ಲಕ್ಷಗಳನ್ನು (ರೂ. ಇನ್ನೂರು ಲಕ್ಷದ ಎಂಬತ್ತೈದು ಸಾವಿರಗಳು ಮಾತ್ರ) 2014-15ನೇ ಸಾಲಿನ ಸೌರ ಬೆಳಕು ಯೋಜನೆಯ ಅನುಷ್ಠಾನಕ್ಕಾಗಿ ಲೆಕ್ಕ ಶೀರ್ಷಿಕೆ 2810-01-198-1-01-300 ಯೋಜನೆ ಅಡಿಯಲ್ಲಿ ಪ್ರಾಯೋಗಿಕವಾಗಿ ಆಯ್ಕೆಯಾದ ಈ ಕೆಳಕಂಡ ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

| ಕ್ರ.ಸಂ | ಜಿಲ್ಲಾ ಪಂಚಾಯತ್ | ಬಿಡುಗಡೆ ಮಾಡಲಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 01 | ಬಾಗಲಕೋಟೆ | 71.25 |
| 02 | ಮೈಸೂರು | 71.25 |
| 03 | ಹಾವೇರಿ | 71.25 |
| 04 | ಗದಗ | 71.25 |
| | ಒಟ್ಟು | **285.00** |

ಸದರಿ ಅನುದಾನವು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟಿರುತ್ತದೆ. ಸದರಿ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಕ್ಕಾಗಿ ವಿನಿಯೋಗಿಸತಕ್ಕದ್ದು.

ಹಾಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ/2/ವೆಚ್ಚ-6/2015 ದಿನಾಂಕ 02.02.2015ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ)
ನಿರ್ದೇಶಕರು (~~ಗ್ರಾಮೂಸೌ-2~~) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಮೈಸೂರು, ಹಾವೇರಿ ಮತ್ತು ಗದಗ ಜಿಲ್ಲೆಗಳು.
3. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
4. ಜಿಲ್ಲಾ ಖಜಾನಾಧಿಕಾರಿಗಳು, ಬಾಗಲಕೋಟೆ, ಮೈಸೂರು, ಹಾವೇರಿ ಮತ್ತು ಗದಗ ಜಿಲ್ಲೆಗಳು.
5. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್ ನಂ. 49, ಸೆಕೆಂಡ್ ಬ್ಲಾಕ್, ಸೆಕೆಂಡ್ ಫ್ಲೋರ್, ಖನಿಜ ಭವನ, ಸೌತ್ ಎಂಟ್ರನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
6. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು (ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.